ಕರ್ನಾಟಕ ವಿಧಾನಸಭೆ

ಶುಕ್ರವಾರ 7ನೇ ಜುಲೈ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಪ್ರಶ್ನೋತ್ತರಗಳು:

1. (ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಕುಡಿಯುವ ನೀರಿನ ಯೋಜನೆಗೆ ವಿಶೇಷ ಅನುದಾನ

255 (946) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ): ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1994–95ನೇ ಸಾಲಿನಿಂದ ಭದ್ರಾವತಿ ತಾಲ್ಲೂಕಿನ ಹಿರಿಯೂರು, ಕಂಬದಾಳ್ ಹೊಸೂರು, ಸಿಂಗನಮನೆ, ಅರಳಿಕೊಪ್ಪ, ತಾವರೆಗಟ್ಟ ಗ್ರಾಮ ಪಂಚಾಯತಿಯ 21 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಅ) ಸದರಿ ಕಾಮಗಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯದವರು ಗ್ರಾ.ಅ.ಪ.42: ಗ್ರಾ.ನೀ.ಸ:4/05, ದಿ: 13.01.2006ರ ಮೂಲಕ ಆಡಳಿತಾತ್ಮಕ ಮಂಜೂರಾತಿ ನೀಡಿರುವುದರಿಂದ ಪ್ರಸಕ್ತ 2006–07ರ ಸಾಲಿನಲ್ಲಿ ಈ ಕಾಮಗಾರಿಗೆ ಅನುದಾನವನ್ನು ಒದಗಿಸಲಾಗುವುದೇ ;

(ಇ) 21 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಇದಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದೇ ?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು):

(ಅ) ಭದ್ರಾವತಿ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ 40LPCD ಪ್ರಮಾಣಕ್ಕಿಂತ ಕಡಿಮೆ ನೀರು ಪೂರೈಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ರೂ. 495.00 ಲಕ್ಷ ಅಂದಾಜಿನ ಬೃಹತ್ ಕುಡಿಯುವ ನೀರಿನ ಯೋಜನೆಗೆ ದಿ: 13.01.2006ರಲ್ಲಿ ಮಂಜೂರಾತಿ ನೀಡಿದೆ.

(ಆ) ಮತ್ತು (ಇ) ಈ ಯೋಜನೆಗೆ ಸಾಮಾನ್ಯ ಕಾರ್ಯಕ್ರಮದಡಿ ಅನುಮೋದನೆ ನೀಡಲಾಗಿದ್ದು, ಅಂತೆಯೇ ರಾಜ್ಯ ಮತ್ತು ಕೇಂದ್ರ ವಲಯದಡಿ ಶಿವಮೊಗ್ಗ ಜಿಲ್ಲಾ ಪಂಚಾಯಿತಿಗೆ ಕುಡಿಯುವ ನೀರಿನ ಬಾಬ್ತಿಗಾಗಿ ಬಿಡುಗಡೆಯಾಗುವ

ಅನುದಾನದ ವತಿಯಿಂದ ಕಾಮಗಾರಿ ಅನುಷ್ಠಾನಗೊಳಿಸಬೇಕಾಗುತ್ತದೆ. ಒಂದು ವೇಳೆ ಯೋಜನೆ ಪೂರ್ಣಗೊಳಿಸುವ ಹಂತದಲ್ಲಿ ಅನುದಾನದ ಕೊರತೆಯಾದಲ್ಲಿ ಜಿಲ್ಲಾ ಪಂಚಾಯಿತಿಗೆ ವಿಶೇಷ ಅನುದಾನ ಬಿಡುಗಡೆ ಮಾಡಲು ಪರಿಶೀಲಿಸಲಾಗುವುದು.

ಶ್ರೀ ಬಿ.ಕೆ. ಸಂಗಮೇಶ್ವರ: ಮಾನ್ಯ ಅಧ್ಯಕ್ಷರೆ, ಈವತ್ತು ನಮ್ಮ ಭದ್ರಾವತಿ ಕ್ಷೇತ್ರದ ಕೆಲವು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ.

(ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಆಗಮಿಸಿ ಧರಣಿನಿರತರಾದರು)

ಜೊತೆಗೆ ನನ್ನ ಕ್ಷೇತ್ರದಲ್ಲಿಯೇ Dam ಇಟ್ಟುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಸಮರ್ಪಕವಾಗಿ ನಾವು ನೀರು ಪೂರೈಕೆ ಮಾಡುತ್ತಿಲ್ಲ. ಹಾಗಾಗಿ, ಇದೊಂದು ಯೋಜನೆಯನ್ನು ತಯಾರು ಮಾಡಿದ್ದೆವು. ಅದಕ್ಕೆ ಆಡಳಿತ ಮಂಜೂರಾತಿ ದೊರಕಿ ಏಳು ತಿಂಗಳಾಗಿದೆ. ಇಲ್ಲಿಯವರೆಗೆ ಯಾವುದೇ ರೂಪದ ಕಾರ್ಯವಾಗಿಲ್ಲ. ದಯಮಾಡಿ ಮಾನ್ಯ ಸಚಿವರು ತಕ್ಷಣ ಇದರ ಬಗ್ಗೆ ಗಮನಹರಿಸಿ ನಮ್ಮ ಕ್ಷೇತ್ರದಲ್ಲಿರುವ ಗ್ರಾಮಾಂತರ ಪ್ರದೇಶಗಳ ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಡಬೇಕೆಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಾವು ಇವತ್ತು ಒಂದು ಸಾವಿರ....

2. **ಕಾಂಗ್ರೆಸ್ ಪಕ್ಷದ ಶಾಸಕರಿಂದ ಸಿಬಿಐ ಎನ್‌ಕ್ವೈರಿ ಒತ್ತಾಯಿಸಿ ಧರಣಿ.**

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಧರಣಿ ಮುಂದುವರೆದಿದೆ. ಧರಣಿ ಏತಕ್ಕೆ? ಏನು ಸಮಾಚಾರ? ವಿಚಾರ ಏನು? ದಯವಿಟ್ಟು ಇದನ್ನೆಲ್ಲಾ ಕೇಳಬೇಕಲ್ಲವೇ? ಧರಣಿ, ಒಂದು ಕಡೆ, ಇನ್ನೊಂದು ಕಡೆ ಪ್ರಶ್ನೋತ್ತರ ಆಗುತ್ತಿದ್ದರೆ ಪರಿಸ್ಥಿತಿ ಏನು? ನಾವು ಸುಮ್ಮನೆ ಕುಳಿತಿರುವುದು, ತಾವು ಸುಮ್ಮನೆ ಕುಳಿತಿರುವುದು ಸರಿಯಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಅವರ ಪಾಡಿಗೆ ಅವರು ನಿಂತುಕೊಂಡಿರುವುದು, ಇವರು question ಕೇಳುತ್ತಿರುವುದು, ನಮಗೆ ನೀವು ಕಾಣುವುದಿಲ್ಲ, ನಿಮಗೆ ನಾವು ಕಾಣುವುದಿಲ್ಲ, ನಾವು ಹೇಗೆ ಸರ್ ಕೆಲಸ ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಕಾಂಗ್ರೆಸ್ ಪಕ್ಷದ ಶಾಸಕರು ಧರಣಿ ಮುಂದುವರೆಸುತ್ತಿದ್ದಾರೆ. ಈ ಬಗ್ಗೆ ಒಂದು ತೀರ್ಮಾನಕ್ಕೆ ತಾವು ಬರಬೇಕು. CBIಗೆ ಒಪ್ಪಿಸಬೇಕೆಂದು ಅವರು ಧರಣಿ ಮಾಡಿದ್ದಾರೆ. ನಿನ್ನೆ CBIಗೆ ಒಪ್ಪಿಸಬೇಕೆಂದು ಮತ್ತು ಮಸೂದೆ ತರಬೇಕೆಂದು ನಾವು ಸಭಾತ್ಯಾಗ ಮಾಡಿದ್ದೇವೆ. ಈ ಮಧ್ಯೆ ಇದು ಇತ್ಯರ್ಥವಾಗದಿರುವುದರಿಂದ ಧರಣಿ ನಡೆಸಲು ಸದನದ ಬಾವಿಗೆ ಬಂದಿದ್ದಾರೆ. ಈಗ ತಾವು ಸದನ ಮುಂದೂಡಿ ಮಾತುಕತೆ ನಡೆಸಿ ಅಥವಾ ಈಗಲೇ ತೀರ್ಮಾನ